**<u>*1* ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,</u>**
**<u>ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು</u>**

<u>ಎಸ್ ಸಿ ಸಂಖ್ಯೆ:**297/2019**</u>

ಪ್ರಾಸಾ.**03**/ಚಾಸಾ.**08**

ಸಾಕ್ಷಿದಾರರ ಹೆಸರು : ನಾಗರಾಜು ಜೆ.ಆರ್.

ತಂದೆ ಹೆಸರು : ರಾಮಯ್ಯ

ವಯಸ್ಸು : **39** ವರ್ಷಗಳು

ಉದ್ಯೋಗ : ಪಿ.ಎಸ್.ಐ. ಚೇಳೂರು ಪೊಲೀಸ್ ಠಾಣೆ

ವಾಸ : ಚೇಳೂರು, ತುಮಕೂರು

<u>ಪ್ರಮಾಣ ವಚನ ಬೋಧಿಸಿದ ದಿನಾಂಕ: **11.07.2025**</u>

<u>ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ</u>

ನಾನು ಈ ಹಿಂದೆ ದಿನಾಂಕ 02.03.2019 ರಿಂದ 15.07.2019 ರವರೆಗೆ ಬ್ಯಾಡರಹಳ್ಳಿ ಪೊಲೀಸ್ ಠಾಣೆಯ ಆರಕ್ಷಕ ಉಪನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ.

ದಿನಾಂಕ 14.06.2019 ರಂದು ಬೆಳಿಗ್ಗೆ 07.30 ರ ಸಮಯದಲ್ಲಿ ಬ್ಯಾಡರಹಳ್ಳಿ ಪೊಲೀಸ್ ಠಾಣೆಯ ಅಂದಿನ ಎ.ಎಸ್.ಐ. ಸುಭಾಷ್ ಚಂದ್ರ ಗೌಡರು 5 ಜನ ಆಸಾಮಿಗಳು ಮತ್ತು ವಶಪಡಿಸಿಕೊಂಡ ವಸ್ತುಗಳ ಸಮೇತ ಠಾಣೆಯ ಸಿಬ್ಬಂಧಿಗಳೊಂದಿಗೆ ಠಾಣೆಗೆ ಹಾಜರಾಗಿ ನೀಡಿದ ವರದಿ ಆಧಾರದ ಮೇಲೆ ಗುನ್ನೆ ದಾಖಲಿಸಿರುತ್ತೇನೆ.

ನಾನು ಸ್ವೀಕರಿಸಿದ ವರದಿಯನ್ನು ಈಗಾಗಲೇ ನಿಪಿ-2 ಎಂದು ಗುರುತು ಮಾಡಿದ್ದು, ಅದನ್ನು ನಾನು ಈಗ ನೋಡಿದ್ದು, ಅದರಲ್ಲಿಯ ನನ್ನ ರುಜುವನ್ನು ಈಗ ನಿಪಿ-2(ಬಿ) ಎಂದು ಗುರುತು ಮಾಡಲಾಯಿತು.

ನಾನು ದಾಖಲಿಸಿದ ಪ್ರ.ವ.ವ. ಈಗ ನನಗೆ ತೋರಿಸಿದ ದಾಖಲೆಯಾಗಿದ್ದು ಅದನ್ನು ಈಗ ನಿಪಿ-3 ಎಂದು, ಅದರಲ್ಲಿಯ ನನ್ನ ರುಜುವನ್ನು ನಿಪಿ-3(ಎ) ಎಂದು ಈಗ ಗುರುತಿಸಲಾಯಿತು.

ಆರೋಪಿತರನ್ನ ವಿಚಾರಣೆಗೆ ಒಳಪಡಿಸಿ ಅವರುಗಳ ವಿರುದ್ದ ದಸ್ತಗಿರಿ ಕ್ರಮ ಜರುಗಿಸಿದೆ. ನಿಪಿ-2 ರ ವರದಿಯನ್ನು ನೀಡಿದ ಅಧಿಕಾರಿ ವಸ್ತುಗಳನ್ನು ವಶಪಡಿಸಿ ನನ್ನ ಮುಂದೆ ಹಾಜರುಪಡಿಸಿದ ಮೇರೆಗೆ ಆ ವಸ್ತುಗಳ ಕುರಿತಂತೆ ಮಾಲುಪಟ್ಟಿ ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. ಸದರಿ ಮಾಲುಪಟ್ಟಿಯನ್ನು ಈಗ ನನ್ನಿಂದ ನಿಪಿ-4 ಎಂದು ಗುರುತಿಸಿದ್ದು, ಅದರಲ್ಲಿಯ ನನ್ನ ರುಜುವನ್ನು ನಿಪಿ-4(ಎ) ಎಂದು ಗುರುತು ಮಾಡಲಾಯಿತು.

ವಿಚಾರಣಾ ಸಮಯದಲ್ಲಿ ಆರೋಪಿತರು ಅವರುಗಳ ಸ್ವಇಚ್ಛೆಯ ಹೇಳಿಕೆಗಳನ್ನು ನೀಡಿದ್ದರು. ಸದರಿ ದಿನದಂದು ನಾನು ಪಂಚಸಾಕ್ಷಿಗಳಾದ ಅಭಿ ಮತ್ತು ಕುಮಾರ್ ರವರ ಹೇಳಿಕೆಗಳನ್ನು ಪಡೆದೆ. ಅಲ್ಲದೆ ಪ್ರತ್ಯಕ್ಷ ಸಾಕ್ಷಿಗಳಾದ ಸುರೇಶ್, ಚಂದ್ರಕುಮಾರ್, ಪರಶುರಾಮ್ ಮತ್ತು ಸುಮನ್(ಸಿಬ್ಬಂದಿ ವರ್ಗದವರು) ಇವರ ಹೇಳಿಕೆ ಪಡೆದೆನು. ಆರೋಪಿತರನ್ನ ಸಂಬಂಧಪಟ್ಟ ನ್ಯಾಯಾಲಯದ ಮುಂದೆ ಹಾಜರುಪಡಿಸಲು ಸಿಬ್ಬಂದಿ ಬೆಂಗಾವಲಿನೊಂದಿಗೆ ಕಳುಹಿಸಿ ಕೊಟ್ಟೆ.

ಪ್ರಕರಣದ ಆಪಾಧನೆ ಗಂಭೀರ ಸ್ವರೂಪದಾಗಿದ್ದ ಕಾರಣ ತನಿಖಾ ಕ್ರಮವನ್ನು ಅಂದಿನ ನನ್ನ ಮೇಲಧಿಕಾರಿಗೆ ಹಸ್ತಾಂತರಿಸಿದೆ.

ನಾನು ಈಗಾಗಲೇ ಉಲ್ಲೇಖಿಸಿದ ಆರೋಪಿತರನ್ನು ಮತ್ತು ನನ್ನ ಸಮಕ್ಷಮ ಹಾಜರುಪಡಿಸಿದ ಮುದ್ದೆಮಾಲುಗಳನ್ನು ನೋಡಿದರೆ ಗುರುತಿಸಬಲ್ಲೆ. ಈಗಾಗಲೇ ಗುರುತು ಹಚ್ಚಿರುವ ಮುದ್ದೆಮಾಲು-1 ರಿಂದ 4 ರ ಮುದ್ದೆಮಾಲುಗಳನ್ನು ನಾನು ಈಗ ನೋಡಿದ್ದು ಅವುಗಳನ್ನೆ ನನ್ನ ಸಮಕ್ಷಮ ಹಾಜರುಪಡಿಸಲಾಗಿತ್ತು.

<u>ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀಯುತ.**WK.**ವಕೀಲರಿಂದಃ</u>

ನಾನು ಈ ದಿನ ಗುರುತು ಹಚ್ಚಿದ ಮುದ್ದೆಮಾಲುಗಳು ಮಾರುಕಟ್ಟೆಯಲ್ಲಿ ಲಭ್ಯವಾಗುತ್ತವೆ ಎಂದರೆ ನಿಮ್ಮ ಸೂಚನೆ ತಪ್ಪು. ಮುದ್ದೆಮಾಲುಗಳನ್ನು ಹೊಲುವ ಮತ್ತು ವಾರಸುದಾರರು ಇಲ್ಲದ ವಸ್ತುಗಳನ್ನು ಉಪಯೋಗಿಸಿ ನಾನು ಮತ್ತು ಇತರ ಅಧಿಕಾರಿಗಳು ಇಲಾಖಾ ಅಂಕಿ ಅಂಶದ ಸಲುವಾಗಿ ಸುಳ್ಳು ದಾಖಲಾತಿಗಳನ್ನು ಸೃಷ್ಠಿಸಿ, ಸುಳ್ಳು ಪ್ರಕರಣವನ್ನ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ನಿಪಿ-2 ರ ವರದಿಯನ್ನು ನೀಡಿದ ಅಧಿಕಾರಿ ಸದರಿ ವರದಿಯ ಸಂಗತಿಗಳನ್ನು ಎಲ್ಲಿ ಬೆರಳಚ್ಚು ಮಾಡಿಸಿರುತ್ತಾರೆ ಎಂಬುದಾಗಿ ನನಗೆ ಗೊತ್ತಿಲ್ಲ. ನಿಪಿ-2 ಅನ್ನು ಠಾಣೆಯಲ್ಲಿಯೇ ಸೃಷ್ಠಿಸಲಾಯಿತು ಎಂದರೆ ಸರಿಯಲ್ಲ.

ನಿಪಿ-4 ರ ಪಿ.ಎಫ್. ದಾಖಲೆಯಲ್ಲಿ ಗುನ್ನೆ ಸಂಖ್ಯೆ ಮತ್ತು ಮುದ್ದೆಮಾಲುಗಳನ್ನು ಸ್ವೀಕರಿಸಿದ ದಿನಾಂಕ ಕುರಿತಂತೆ ತಿದ್ದುಪಡಿ ಮಾಡಲಾಗಿದೆ ಎಂದರೆ ಸರಿಯಲ್ಲ. ನಿಪಿ-4 ರನ್ನ ಸೃಷ್ಠಿಸಿ ಪ್ರಸ್ತುತ ಪ್ರಕರಣದಲ್ಲಿ ಅಳವಡಿಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ಯಾವುದೇ ಮುದ್ದೆಮಾಲುಗಳನ್ನು ನನ್ನ ಸಮಕ್ಷಮ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ನಿಪಿ-1 ರಲ್ಲಿ ಸಹ ದಿನಾಂಕ ಕುರಿತಂತೆ ತಿದ್ದುಪಡಿ ಮಾಡಲಾಗಿದೆ ಎಂದರೆ ಸರಿಯಲ್ಲ. ಚಾಸಾ-1 ರವರು ನನಗೆ ಯಾವುದೇ ವರದಿಯನ್ನ ನೀಡಿಲ್ಲ ಮತ್ತು ನಾನು ಗುನ್ನೆಯನ್ನು ದಾಖಲಿಸಿಲ್ಲ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ನುಡಿದಂತೆ ಯಾವುದೇ ಸಾಕ್ಷಿಗಳ ಹೇಳಿಕೆಗಳನ್ನ ದಾಖಲಿಸಿಲ್ಲ ಎಂದರೆ ಸರಿಯಲ್ಲ. ಆರೋಪಿತರ ಪೈಕಿ ಯಾರು ಸಹ ನನ್ನ ಸಮಕ್ಷಮ ಸ್ವಇಚ್ಛಾ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿತರನ್ನು ನಾನು ದಸ್ತಗಿರಿ ಕ್ರಮಕ್ಕೆ ಒಳಪಡಿಸಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೂ ಮತ್ತು ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲದೆ ಇದ್ದರೂ ನಾನು ಅಸತ್ಯ ಸಾಕ್ಷಿ ನುಡಿದೆ ಎಂದರೆ ಸರಿಯಲ್ಲ.

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೇ. ಕೇ. ಸ. ಒ.

(ಸಿದ್ದಲಿಂಗ ಪ್ರಭು)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.